ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.05/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಡಾ॰ವಿಜಯ್ ಮಹಾಂತ ಪ್ರಸಾದ್** | | |
| **ತಂದೆ॰ಹೆಸರು** | **ವಾಮಣ್ಣ** | **ಪಿಡಬ್ಲೂ॰** | **4** |
| **ವಯಸ್ಸು॰** | **43 ವರ್ಷ** | **ಸಿಡಬ್ಲೂ॰** | **6** |
| **ಉದ್ಯೋಗ॰** | **ವೈದ್ಯಾಧಿಕಾರಿ, ವಿಮ್ಸ್ ಬಳ್ಳಾರಿ.** | | |
| **ವಾಸ ಸ್ಥಳ॰** | **ಬಳ್ಳಾರಿ.** | | |

**ದಿನಾಂಕ 17-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ॰ ಮಾನ್ಯ ಸ.ಸ.ಅ. ರವರಿಂದ॰॰**

ನಾನು 2019 ರಿಂದ 2022 ನವರೆಗೂ ನಾನು ಸಿಂಧನೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿನಾಂಕ॰16.06.2021 ರಂದು ಬೆ. 10-10 ಗಂಟೆಗೆ ಚಾಸಾ-1 ರವರು ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಹತ್ತಿರ ಚಿಕಿತ್ಸೆಗೆಂದು ಬಂದಿದ್ದರು. ಸದರಿಯವರನ್ನು ನಾನು ಪರೀಕ್ಷೆ ಮಾಡಿರುತ್ತೇನೆ. ಸದರಿ ಗಾಯಾಳುವನ್ನು ನಾನು ಪರೀಕ್ಷೆ ಮಾಡಿದಾಗ ಈ ಕೆಳಕೆಂಡ ಗಾಯಗಳು ಕಂಡುಬಂದಿರುತ್ತವೆ.

1) ಬಲ ಹಣೆಯ ಮೇಲೆ ರಕ್ತಗಾಯ 4 X 3 ಸೆ. ಮೀ. ಗಾಯ ಇತ್ತು.

ಸದರಿ ಗಾಯ ಕಬ್ಬಿಣದಿಂದ ಹೊಡೆದರೆ ಆಗುವ ಸಾಧ್ಯತೆ ಇರಬಹುದು.

ಗಾಯಾಳುವನ್ನು ಪರೀಕ್ಷಿಸಿ ಸಾಮಾನ್ಯ ಸ್ವರೂಪದ ಗಾಯಗಳು ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿ.ಪಿ.6 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ)ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1. ನೀವು ಎಲುಬು ತಜ್ಞರು ಎಂದರೆ ಸರಿ. ಸದರಿ ಗಾಯಾಳು ಮೊದಲು ಹೊರ ರೋಗಿ ಎಂದು ಬಂದು ಚಿಕಿತ್ಸೆ ಪಡೆದಿದ್ದ, ನಂತರ ದಾಖಲಾಗಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಗಾಯಗಳು ಸಾದಾ ಸ್ವರೂಪದ ಗಾಯ. ನಾನು ಅಂದಾಜಾಗಿ ಸದರಿ ಗಾಯದ ಅಳತೆಯನ್ನು ನಿಪಿ-6 ರಲ್ಲಿ ಹೇಳಿರುತ್ತೇನೆ.

2. ನಾನು ಗಾಯಾಳುವಿನ ಫೋಟೋವನ್ನು ತೆಗೆದಿರುವುದಿಲ್ಲ.

3. ಮು.ಮಾ. 1 ರಿಂದ ಹೊಡೆದರೆ ವ್ಯಕ್ತಿ ಬದುಕುತ್ತಾನೋ ಅಥವಾ ಸಾಯುತ್ತಾನೋ ಎಂದರೆ ಸಾಕ್ಷಿಯು ಅದು ಬಲದ ಮೇಲೆ ಅವಲಂಬಿತವಾಗಿರುತ್ತದೆ ಎನ್ನುತ್ತಾರೆ. ಸದರಿ ಗಾಯವನ್ನು ಬ್ಲೇಡ್‌ನಿಂದ ಕಟ್ ಮಾಡಿಕೊಂಡರೆ, ಬಿದ್ದರೆ ಆಗಬಹುದು ಎಂದರೆ ಸರಿ.

4. ಗಾಯಾಳುವನ್ನು ನಾನು ಅರ್ಧ ಗಂಟೆ ಪರೀಕ್ಷೆ ಮಾಡಿದ್ದೆ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**